## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಜಗನ್ನಾಥ ಮಾಣಿಕಪ್ಪ, ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯಿತಿ, ಔರಾದ(ಬಿ) ರವರ ವಿರುದ್ಧದ ಶಿಸ್ತು ಕ್ರಮ- ಸೇವೆಯಿಂದ ಅಮಾನತ್ತುಗೊಳಿಸುವ ಬಗ್ಗೆ- ಆದೇಶ.

ಓದಲಾಗಿದೆ: ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಬೀದರ್, ಇವರ ಪತ್ರ ಸಂ. ಜಿಪಂಬೀ/ಸಿಬ್ಬಂದಿ-1/ಸಿಆರ್-21/2016-17/10890- ದಿನಾಂಕ: 16-07-2016.

------

ಪ್ರಸ್ತಾವನೆ:

ಮೇಲೆ ಓದಲಾದ ದಿನಾಂಕ 16-07-2016ರ ಪತ್ರದಲ್ಲಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯಿತಿ, ಬೀದರ್ ಇವರು ಸರ್ಕಾರಕ್ಕೆ ಸಲ್ಲಿಸಿರುವ ವರದಿಯಲ್ಲಿ ಶ್ರೀ ಅಂಗದ ಜಿ. ಪಾಟೀಲ್, ಗುರುನಗರ ಕಾಲೋನಿ ಬೀದರ್ ಇವರು ದಿನಾಂಕ: 25-04-2016 ರಂದು ಸಲ್ಲಿಸಿರುವ ದೂರಿನ ಆಧಾರದ ಮೇಲೆ ಶ್ರೀ ಜಗನ್ನಾಥ ಮಾಣಿಕಪ್ಪ, ಕಾರ್ಯನಿವಾಹಕ ಅಧಿಕಾರಿಗಳು, ಔರಾದ್(ಬಿ) ಇವರಿಗೆ ಕಾರಣ ಕೇಳುವ ನೋಟಿಸನ್ನು ಜಾರಿಗೊಳಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಅವರು ಲಿಖಿತ ಹೇಳಿಕೆಯನ್ನು ಸಲ್ಲಿಸಿದ್ದು ಸದರಿ ವಿವರಣೆಯಲ್ಲಿ ಕರ್ತವ್ಯಲೋಪಗಳು ಕಂಡುಬಂದಿರುವುದರಿಂದ ಇದರ ಬಗ್ಗೆ ಸತ್ಯಾಸತ್ಯತೆಯನ್ನು ತಿಳಿಯಲು ಶ್ರೀ ಗೌತಮ ಅರಳಿ ನೋಡಲ್ ಅಧಿಕಾರಿಗಳು ಸ್ವಚ್ಛ ಭಾರತ ಮಿಷನ್ ಜಿಲ್ಲಾ ಪಂಚಾಯತ್ ಬೀದರ್ ಹಾಗೂ ಔರಾದ ತಾಲ್ಲೂಕು ನೋಡಲ್ ಅಧಿಕಾರಿಗಳು, ಮತ್ತು ಇತರೆ ಅಧಿಕಾರಿಗಳನ್ನು ಒಳಗೊಂಡಂತೆ ತನಿಖೆ ನಡೆಸಿ ವರದಿ ನೀಡಲು ಸೂಚಿಸಲಾಗಿತ್ತು. ಅದರಂತೆ ಸದರಿ ದೂರಿನ ಬಗ್ಗೆ ಸತ್ಯಾಸತ್ಯತೆಯನ್ನು ಪರಿಶೀಲಿಸಿ ದಿನಾಂಕ: 11-07-2016 ರಂದು ವರದಿಯನ್ನು ಸಲ್ಲಿಸಿರುತ್ತಾರೆ. ವರದಿಯ ಪ್ರಮುಖ ಅಂಶಗಳು ಈ ಕೆಳಕಂಡಂತಿವೆ.

ಆರೋಪ-1 ವಾಹನಗಳ ದುರುಪಯೋಗ ಹಾಗೂ ಸುಳ್ಳು ವಿವರಣೆ ಸಲ್ಲಿಸಿರುವ ಬಗ್ಗೆ.

- ಸದರಿ ದೂರಿನಲ್ಲಿ ತಿಳಿಸಿರುವಂತೆ ಸಾರಿಗೇತರ (Non Commercial) ವಾಹನ ಪಡೆದು ಸರ್ಕಾರದ ನಿಯಮವನ್ನು ಉಲ್ಲಂಘಿಸಿರುತ್ತಾರೆ. ಅಲ್ಲದೇ ಸಾರಿಗೆ (Commercial) ವಾಹನ ಪಡೆದಿರುವುದಾಗಿ ತಮ್ಮ ವಿವರಣೆಯಲ್ಲಿ ಈ ಕಛೇರಿಗೆ ಸುಳ್ಳು ಮಾಹಿತಿ ನೀಡಿರುತ್ತಾರೆ.
- ದೂರಿನ ಎರಡನೇ ಅಂಶಕ್ಕೆ ಸಂಬಂಧಿಸಿದಂತೆ ಕಾರ್ಯನಿರ್ವಾಹಕ ಅಧಿಕಾರಿ ನೀಡಿದ ಹೇಳಿಕೆಯಲ್ಲಿ ಸದರಿ ವಾಹನ ಸಂಖ್ಯೆ: ಕೆಎ-38 ಎಂ-4060 ಪಡೆಯಲಾಗಿದ್ದು, ಕರಾರು ಪತ್ರ ಸಮಯದಲ್ಲಿ ಸದರಿ ವಾಹನ ಸಂಖ್ಯೆ: ಟಿ.ಆರ್.ನಂ. 4054 ಇರುತ್ತದೆ. ನಂತರ ಕೆ-38, ಎಂ-4060 ಎಂದು ಆರ್.ಟಿಓ. ರವರು ನಂಬರ ನೀಡಿರುತ್ತಾರೆಂದು ತಿಳಿಸಿರುತ್ತಾರೆ. ಆದರೆ ಸದರಿ ಅಂಶದ ಬಗ್ಗೆ ತನಿಖಾಧಿಕಾರಿಗಳು ಪರಿಶೀಲನೆ ಮಾಡಿ ಈ ಕೆಳಗಿನಂತೆ ವರದಿ ನೀಡಿರುತ್ತಾರೆ.
- ಕರಾರು ಒಪ್ಪಂದಕ್ಕಾಗಿ ಪಡೆದ e-Stamp Paper ಸಂಖ್ಯೆ: In-KA-04032909348436N ನ್ನು ಶ್ರೀ ಎಮ್.ಡಿ.ಸಲಾವೋದ್ದಿನ್ ತಂದೆ ಅಕ್ರಮ್ ತಾ: ಔರಾದ(ಬಿ) ರವರ ಹೆಸರಿನಲ್ಲಿ ಪಡೆದಿದ್ದು, ಅದನ್ನು ತಿದ್ದುಪಡಿ ಮಾಡಿ ಶ್ರೀ ಶರಣಪ್ಪಾ ತಂದೆ ಕಾಮಶೆಟ್ಟಿ ಮು: ಮುಸ್ತಾಪೂರು ರವರ ಹೆಸರಿನಲ್ಲಿ ಒಪ್ಪಂದ ಮಾಡಿಕೊಂಡಿರುತ್ತಾರೆ. ಇದು ನಿಯಮ ಬಾಹಿರವಾಗಿರುತ್ತದೆ.

GO

- ಕರಾರು ಒಪ್ಪಂದ ಪತ್ರದಲ್ಲಿ ಕೆಎ-38 ಎಂ-4060 ಬದಲಾಗಿ ಕೆ-38 ಎಂ-4054 ಎಂದು ಬರೆದುಕೊಂಡು ಒಪ್ಪಂದ ಸಹಿ ಮಾಡಿಸಿಕೊಳ್ಳಲಾಗಿದೆ.

- ಈ ಮೇಲಿನ ಅಂಶಗಳನ್ನು ಅವಲೋಕಿಸಿದಾಗ ದಿನಾಂಕ: 19-05-2016 ರಂದು ಕಾರ್ಯನಿರ್ವಾಹಕ ಅಧಿಕಾರಿಗಳು, ತಮ್ಮ ಹೇಳಿಕೆಯಲ್ಲಿ ಕೆ-38, ಎಂ-4054 ಸಂಖ್ಯೆಯ ತಾತ್ಕಾಲಿಕ ನೋಂದಣಿಯಾಗಿರುತ್ತದೆಂದು ಹೇಳಿಗೆ ನೀಡಿರುತ್ತಾರೆ. ಆದರೆ ಸದರಿ ಸಂಖ್ಯೆ ತಾತ್ಕಾಲಿಕ ನೋಂದಣಿ ಸಂಖ್ಯೆಯಾಗಿರದೇ ಬೇರೊಂದು ವಾಹನದ Swift Desire ಕಾರಿನ ನೋಂದಣಿಯಾಗಿರುತ್ತದೆ.

- ವಿವರಣೆ ಸಲ್ಲಿಸಿದ ಕಂಡಿಕೆ-3ರ ಬಾಡಿಗೆ ಮೇಲೆ ಪಡೆದ ವಾಹನಕ್ಕೆ ಸರ್ಕಾರಿ ವಾಹನದ ಚಾಲಕರನ್ನು ಸೇವೆ ಬಳಸಿಕೊಂಡಿರುವ ಬಗ್ಗೆ ಪರಿಶೀಲನಾಧಿಕಾರಿಗಳು, ಸರ್ಕಾರದಿಂದ ನಿಗದಪಡಿಸಿದ ಬಾಡಿಗೆಯ ಮೊತ್ತದಲ್ಲಿ ಖಾಸಗಿ ವಾಹನದ ಮಾಲಿಕರು ಒಪ್ಪಂದದ ಪ್ರಕಾರ ವಾಹನದ ಜೊತೆಗೆ ಖಾಸಗಿ ವಾಹನ ಚಾಲಕರನ್ನು ಒದಗಿಸಬೇಕಾಗಿರುತ್ತದೆ. ಆದರೆ ಈ ಪ್ರಕರಣದಲ್ಲಿ ಕಛೇರಿಯಲ್ಲಿನ ಸರ್ಕಾರಿ ವಾಹನ ಚಾಲಕ ಶ್ರೀ ಶರೀಫ್ ಅವರು ಕಾರ್ಯನಿರ್ವಹಿಸುತ್ತಿದ್ದು, ಅವರೇ ಈ ಬಾಡಿಗೆ ವಾಹನ ಚಾಲಕರಾಗಿ ಕಾರ್ಯನಿರ್ವಹಿಸುತ್ತಿರುವುದು ಗಮನಿಸಲಾಗಿದೆ. ಹೀಗಾಗಿ ಪೂರ್ಣ ಪ್ರಮಾಣದ ಬಾಡಿಗೆಯನ್ನು ಪಾವತಿಸಿ ಸರ್ಕಾರಿ ವಾಹನ ಚಾಲಕನನ್ನು ಬಾಡಿಗೆ ವಾಹನ ಚಾಲಕನಾಗಿ ಬಳಸಿಕೊಂಡಿರುವುದು ಸಮಂಜಸವಾಗಿರುವುದಿಲ್ಲವೆಂದು ವರದಿ ನೀಡಿರುತ್ತಾರೆ.

- ಸರ್ಕಾರಿ ವಾಹನದ ಚಾಲಕರನ್ನು ಮೇಲಾಧಿಕಾರಿಗಳ ಪರವಾನಿಗಿದೊಂದಿಗೆ ಬಳಸಿಕೊಂಡಲ್ಲಿ ಸದರಿ ಬಾಡಿಗೆಯ ವಾಹನದ ಮೊತ್ತದಲ್ಲಿ ಕಡಿತಗೊಳಸಬಹುದಾಗಿತ್ತು. ಆದರೆ ಕಾರ್ಯನಿವಾಹಕ ಅಧಿಕಾರಿಗಳು ಕೊಟ್ಟಿರುವ ಹೇಳಿಕೆ ನಿಜವಾಗಿರುವುದಿಲ್ಲವೆಂದು ಗಮನಿಸಲಾಗಿದೆ.

- ಜಿಲ್ಲಾ ನೋಡಲ್ ಅಧಿಕಾರಿಗಳು ಸ್ವಚ್ಛ ಭಾರತ್ ಮಿಷನ್ ಹಾಗೂ ಔರಾದ(ಬಿ) ತಾಲ್ಲೂಕು ನೋಡಲ್ ಅಧಿಕಾರಿ, ಜಿಲ್ಲಾ ಪಂಚಾಯತ್ ಬೀದರ್ ಇವರುಗಳು ದಿನಾಂಕ: 11-07-2016 ರಂದು ಸಲ್ಲಿಸಿರುವ ವರದಿಯನ್ನಾಧರಿಸಿ ವಾಹನವು ಅಭಿವೃದ್ಧಿ ಕಾರ್ಯಗಳ ಪರಿಶೀಲನೆಗೆ ಬಳಸದೇ ಬೀದರ ದಿಂದ ಔರಾದ, ಹಾಗೂ ಔರಾದ ದಿಂದ ಬೀದರ ಓಡಾಡಲು ಮಾತ್ರ ಬಳುಸುತ್ತಿರುವ ಆರೋಪಕ್ಕೆ ಪರಿಶೀಲನಾಧಿಕಾರಿಗಳು, ಪರಿಶೀಲನೆ ನಡೆಸಿ, ಸದರಿ ವಾಹನವು ಬಾಡಿಗೆ ಪಡೆದ ನಂತರ ಕಛೇರಿ ಅಧಿಕೃತ ಕೆಲಸ ಕಾರ್ಯಗಳಿಗಾಗಿ ಮಾತ್ರ ಬಳಸತಕ್ಕದ್ದು. ಆದರೆ ವಾಹನದ ಓಡಾಟದ ಬಗ್ಗೆ ಯಾವುದೇ ರೀತಿಯ ಲಾಗ್ ಬುಕ್ ನ್ನು ನಿರ್ವಹಣೆ ಮಾಡಿರುವುದಿಲ್ಲವೆಂದು ತಿಳಿಸಿರುತ್ತಾರೆ. ಹೀಗಾಗಿ ಸದರಿ ವಾಹನ ಒಪ್ಪಂದದ ಪ್ರಕಾರ 24 ಘಂಟೆ ಕಛೇರಿಯ ಅಧೀನದಲ್ಲಿ ಇರತಕ್ಕದ್ದು. ಆದರೆ ದೂರಿನಲ್ಲಿ ಪ್ರತಿ ದಿನ ಔರಾದ ದಿಂದ ಬೀದರ ಮತ್ತು ಬೀದರ ದಿಂದ ಔರಾದ ಓಡಾಡುತ್ತಿರುವ ಬಗ್ಗೆ ದೂರು ನೀಡಿರುತ್ತಾರೆ. ಈ ಬಗ್ಗೆ ಪರಿಶೀಲಿಸಲು ಲಾಗ್ ಬುಕ್ ಇಲ್ಲದೇ ಇರುವುದು ಮತ್ತು ಅಧಿಕಾರಿ ಹಾಗೂ ಚಾಲಕರ ಮೊಬೈಲ್ Call Record ಪರಿಶೀಲಿಸುವ ಪ್ರಕ್ರಿಯೆ ಜಾರಿಯಲ್ಲಿರುವುದರಿಂದ ಈ ಬಗ್ಗೆ ಪ್ರಯುಕ್ತ ಸ್ಪಷ್ಟವಾಗಿ ಅಭಿಪ್ರಾಯ ನೀಡಲು ಆಗಿರುವುದಿಲ್ಲ. ಆದರೆ ಲಾಗ್ ಬುಕ್ ನಿರ್ವಹಣೆ ಮಾಡದೇ ಇರುವುದು ಕೂಡ ತಪ್ಪಾದ ಅಂಶವೆಂದು ಅಭಿಪ್ರಾಯವಾಗಿರುತ್ತದೆ.

ಆರೋಪ-2 ದಾಬಕಾ ಗ್ರಾಮ ಪಂಚಾಯತಿಯಲ್ಲಿ ಎಮ್.ಜಿ.ಎನ್.ಆರ್.ಇ.ಜಿ.ಎ. ಯೋಜನೆಯಡಿ ಕರ್ತವ್ಯಲೋಪದ ಬಗ್ಗೆ:-

- ಶ್ರೀಮತಿ ಮೀನಾ ಗಂಡ ವಿಜಯಕುಮಾರ ಸಾ: ದಾಪಕಾ ತಾ: ಔರಾದ(ಬಿ) ಇತರರು ದಾಪಕಾ ಗ್ರಾಮ ಪಂಚಾಯತಿಯಲ್ಲಿ ಎಮ್.ಜಿ.ಎನ್.ಆರ್.ಇ.ಜಿ.ಎ. ಯೋಜನೆಯಡಿ

GO

ತೆರೆದ ಬಾವಿ ಕಾಮಗಾರಿಯಲ್ಲಿ ನಡೆದ ಅವ್ಯವಹಾರಕ್ಕೆ ಸಂಬಂಧಿಸಿದಂತೆ, ಸದರಿ ದೂರಿನ ಬಗ್ಗೆ ಪರಿಶೀಲನೆ ಮಾಡಿ ಕ್ರಮ ಜರುಗಿಸುವಂತೆ ನಿರ್ದೇಶಕರು ಎಮ್.ಜಿ.ಎನ್.ಆರ್.ಇ.ಜಿ.ಎ. ಬೆಂಗಳೂರು ರವರು ನಿರ್ದೇಶನ ನೀಡಿರುತ್ತಾರೆ. ಈ ದೂರಿನ ಬಗ್ಗೆ ಪರಿಶೀಲಿಸಿ ವರದಿ ನೀಡಲು ಒಂಬಡ್ಸಮನ್ (ಎಮ್.ಜಿ.ಎನ್.ಆರ್.ಇ.ಜಿ.ಎ.) ಜಿಲ್ಲಾ ಪಂಚಾಯತ್ ಬೀದರ್ ಇವರಿಗೆ ತಿಳಿಸಿರುವ ಹಿನ್ನೆಲೆಯಲ್ಲಿ ಪರಿಶೀಲನೆ ಮಾಡಿ ವರದಿ ಸಲ್ಲಿಸಿರುತ್ತಾರೆ. ಸದರಿ ವರದಿ ಪರಿಶೀಲಿಸಲಾಗಿ, ದಾಪಕಾ ಗ್ರಾಮ ಪಂಚಾಯತಿಯ ಅಧ್ಯಕ್ಷರು, ಪಂಚಯತ್ ಅಭಿವೃದ್ಧಿ ಅಧಿಕಾರಿ, ಕಿರಿಯ ಅಭಿಯಂತರರು (ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ) ಹಾಗೂ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು, ಪಂಚಾಯತ್ ರಾಜ್ ಇಂಜಿನಿಯರಿಂಗ್, ಇವರ ಮೇಲಿನ ಆರೋಪಗಳು ಸಾಬೀತಾಗಿರುವುದರಿಂದ ಇವರ ವಿರುದ್ಧ ಕ್ರಿಮಿನಲ್ ಕೇಸ್ ದಾಖಲಿಸಲು ಕಾರ್ಯನಿವಾಹಕ ಅಧಿಕಾರಿಗಳಿಗೆ ಸೂಚಿಸಲಾಗಿತ್ತು. ಆದರೆ ಸದರಿಯವರ ವಿರುದ್ಧ ಯಾವುದೇ ಕ್ರಿಮಿನಲ್ ಕೇಸ್ ದಾಖಲಿಸಿರುವುದಿಲ್ಲ. ಈ ದಿಸೆಯಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಕಾರಣ ಕೇಳುವ ನೋಟಿಸಿಗೆ ಉತ್ತರ ಸಲ್ಲಿಸಿರುವುದಿಲ್ಲ. ಈ ರೀತಿಯಾಗಿ ಇವರು ಮೇಲಾಧಿಕಾರಿಗಳ ಆದೇಶ ಉಲ್ಲಂಘಿಸಿರುವ ಆರೋಪಕ್ಕೆ ಗುರಿಯಾಗಿರುವುದಲ್ಲದೆ ಮೇಲುಸ್ತಾವಾರಿ ಮಾಡಲು ವಿಫಲತೆ ಹೊಂದಿರುತ್ತಾರೆ. ಈ ರೀತಿ ಮೇಲಾಧಿಕಾರಿಗಳ ಆದೇಶ ಪಾಲಿಸದೇ ಕರ್ತವ್ಯಲೋಪವೆಸಗಿರುತ್ತಾರೆ.

ಆರೋಪ-3 ದಾಬಕಾ ಗ್ರಾಮ ಪಂಚಾಯತಿಯಲ್ಲಿ ಬಿ.ಆರ್.ಜಿ.ಎಫ್. ಯೋಜನೆಯ ಹಣ ದುರ್ಬಳಕೆಗೆ ಸಂಬಂಧಿಸಿದಂತೆ ಕರ್ತವ್ಯಲೋಪವೆಸಗಿರುವ ಬಗ್ಗೆ:-

- ಶ್ರೀ ವಿಜಯಕುಮಾರ್‌ಎಸ್.ಪಾಟೀಲ್, ಮು: ದಾಬಕಾ (ಸಿಎಚ್) ತಾ: ಔರಾದ ಇವರು ಔರಾದ ತಾಲ್ಲೂಕಿನ ದಾಬಕಾ(ಸಿಎಚ್) ಗ್ರಾಮ ಪಂಚಾಯತಿಯಲ್ಲಿ ಬಿ.ಆರ್.ಜಿ.ಎಫ್. ಯೋಜನೆಯಡಿಯಲ್ಲಿ ಹಣ ದುರುಪಯೋಗ ಆಗಿರುವುದಾಗಿ ಮೇರೆಗೆ ಸರ್ಕಾರಕ್ಕೆ ದೂರು ಸಲ್ಲಿಸಿರುತ್ತಾರೆ. ಸದರಿ ದೂರಿನ ಬಗ್ಗೆ ಪರಿಶೀಲನೆ ಮಾಡಿ ಕ್ರಮ ಜರುಗಿಸುವಂತೆ ದಿನಾಂಕ: 03-11-2014 ಪತ್ರದ ಮೇರೆಗೆ ನಿರ್ದೇಶನ ನೀಡಲಾಗಿರುತ್ತದೆ. ಅದರಂತೆ ಸದರಿ ದೂರಿನ ಬಗ್ಗೆ ಪರಿಶೀಲನೆ ಮಾಡಿ ವರದಿ ಸಲ್ಲಿಸುವಂತೆ ಕೃಷಿ ಉಪನಿರ್ದೇಶಕರು-1 ಜಂಟಿ ಕೃಷಿ ನಿರ್ದೇಶಕರ ಕಛೇರಿ ಬೀದರ್ ಇವರಿಗೆ ನಿಯೋಜಿಸಲಾಗಿತ್ತು. ಸದರಿ ಅಧಿಕಾರಿಗಳು, ಗ್ರಾ.ಪಂ.ದಾಬಕಾ ಕಛೇರಿಗೆ ಭೇಟಿ ನೀಡಿದಾಗ ಹಿಂದಿನ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು, ಪ್ರಸ್ತುತ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳಿಗೆ ಯಾವುದೇ ದಾಖಲೆಗಳು ಹಸ್ತಾಂತರಿಸಿಲ್ಲವೆಂದು ಪರಿಶೀಲನಾ ಅಧಿಕಾರಿಗಳಿಗೆ ತಿಳಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ ದೂರಿನ ಬಗ್ಗೆ ಪರಿಶೀಲಿಸಿ ನಿರ್ಣಯ ಕೈಗೊಳ್ಳಲು ಸಾಧ್ಯವಾಗಿರುವುದಿಲ್ಲವೆಂದು ಉಪ ಕೃಷಿ ನಿರ್ದೇಶಕರು, ಬೀದರ ರವರು ದಿನಾಂಕ: 13-03-2015 ರಲ್ಲಿ ವರದಿ ಸಲ್ಲಿಸಿರುತ್ತಾರೆ.
- ಪ್ರಭಾರ ಹಸ್ತಾಂತರಿಸುವ ಬಗ್ಗೆ ತಕ್ಷಣವೇ ಕ್ರಮ ಜರುಗಿಸಿ ವರದಿ ನೀಡುವಂತೆ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ 28-01-2016 ಮತ್ತು 22-02-2016 ರ ಪತ್ರದಲ್ಲಿ ತಿಳಿಸಲಾಗಿತ್ತು. ಆದರೂ ಸಹ ಪ್ರಭಾರ ಹಸ್ತಾಂತರ ಮಾಡಿಸಿರುವುದಿಲ್ಲ. ನಂತರ ಪ್ರಭಾರ ಹಸ್ತಾಂತರಿಸದ ನೌಕರರ ವಿರುದ್ಧ ಶಿಸ್ತುಕ್ರಮ ಜರುಗಿಸುವಂತೆ ದಿನಾಂಕ: 31-03-2016 ರನ್ವಯ ಕಾರ್ಯನಿರ್ವಾಹಕ ಅಧಿಕಾರಿಗಳು ವರದಿ ನೀಡಿರುತ್ತಾರೆ. ಈ ರೀತಿಯಾಗಿ ಕಾರ್ಯನಿರ್ವಾಹಕ ಅಧಿಕಾರಿಗಳು ಪ್ರಭಾರ ಹಸ್ತಾಂತರಿಸುವ ಬಗ್ಗೆ ಕ್ರಮ ಜರುಗಿಸುವಲ್ಲಿ ನಿರ್ಲಕ್ಷ್ಯಧೋರಣೆ ಹಾಗೂ ಮೇಲುಸ್ತುವಾರಿ ಮಾಡುವಲ್ಲಿ ಸಂಪೂರ್ಣ ವಿಫಲರಾಗಿರುತ್ತಾರೆ. ಈ ದಿಸೆಯಲ್ಲಿ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ದಿನಾಂಕ: 12-05-2016 ರಂದು ಕಾರಣ ಕೇಳುವ ನೋಟಿಸು ಜಾರಿ

ಮಾಡಿ ವಿವರಣೆ ಸಲ್ಲಿಸಲು ತಿಳಿಸಿದರು ಸಹ ಇಲ್ಲಿಯವರೆಗೆ ಯಾವುದೇ ವಿವರಣೆ ಸಲ್ಲಿಸಿರುವುದಿಲ್ಲ. ಈ ರೀತಿ ಮೇಲಾಧಿಕಾರಿಗಳ ಆದೇಶ ಪಾಲಿಸದೇ ಕರ್ತವ್ಯಲೋಪವೆಸಗಿರುತ್ತಾರೆ.

ಆರೋಪ-4:- ಮುರ್ಕಿ ಗ್ರಾಮ ಪಂಚಾಯತಿಯಲ್ಲಿ 13ನೇ ಹಣಕಾಸು ಯೋಜನೆಯಡಿ ನಡೆದ ಅವ್ಯವಹಾರಕ್ಕೆ ಸಂಬಂಧಿಸಿದಂತೆ ಕರ್ತವ್ಯಲೋಪ:-

- ಔರಾದ ತಾಲ್ಲೂಕಿನ ಮುರ್ಕಿ ಗ್ರಾಮ ಪಂಚಯತಿಯಲ್ಲಿ 2014-15ನೇ ಹಾಗೂ 2015-16ನೇ ಸಾಲಿನಲ್ಲಿ 13ನೇ ಹಣಕಾಸು ಯೋಜನೆಯಡಿಯಲ್ಲಿ ನಡೆದ ಅವ್ಯವಹಾರದ ದೂರಿಗೆ ಸಂಬಂಧಿಸಿದಂತೆ ನೋಡಲ್ ಅಧಿಕಾರಿಗಳು, ಔರಾದ್ ತಾಲ್ಲೂಕು ಹಾಗೂ ನೋಡಲ್ ಅಧಿಕಾರಿಗಳು, ಸ್ವಚ್ಛ ಭಾರತ್ ಮಿಷನ್ ಜಿಲ್ಲಾ ಪಂಚಾಯತ್ ಬೀದರ್ ಇವರು ದಿನಾಂಕ: 14-09-2015ರಲ್ಲಿ ಪರಿಶೀಲನೆ ಕೈಗೊಂಡು ವರದಿ ಸಲ್ಲಿಸಿರುತ್ತಾರೆ. ಸದರಿ ವರದಿಯಂತೆ 13ನೇ ಹಣಕಾಸು ಯೋಜನೆಯಡಿ ಸರ್ಕಾರದ ಮಾರ್ಗಸೂಚಿಗಳನ್ನು ಉಲ್ಲಂಘಿಸಿ ಖರ್ಚು ವೆಚ್ಚಗಳನ್ನು ಮಾಡಿರುತ್ತಾರೆಂದು ವರದಿ ಮಾಡಿ ನಿಯಂತ್ರಣಾಧಿಕಾರಿಗಳಾದ ಕಾರ್ಯನಿರ್ವಾಹಕ ಅಧಿಕಾರಿ ಕಾಲನುಕ್ರಮವಾಗಿ ಪರಿಶೀಲಿಸುತ್ತಾ ಬಂದಲ್ಲಿ ಈ ತರಹದ ಹಣ ದುರುಪಯೋಗ ತಡೆಯಬಹುದಾಗಿರುತ್ತದೆಂದು ತಿಳಿಸಿರುತ್ತಾರೆ. (ಪರಿಶೀಲನಾ ವರದಿ ಲಗತ್ತಿಸಿದೆ).

ಆರೋಪ-5 ಹೋಕ್ರಾಣಾ ಗ್ರಾಮ ಪಂಚಾಯತ್‌ದಲ್ಲಿಯ ಡಾಟಾ ಎಂಟ್ರಿ ಆಪರೇಟರ್ ಆತ್ಮಹತ್ಯೆ ಪ್ರಕರಣದಲ್ಲಿ ಎಫ್.ಐ.ಆರ್. ದಲ್ಲಿ ಇವರ ಹೆಸರು ದಾಖಲಿಸಿರುವ ಬಗ್ಗೆ:-

- ಔರಾದ ತಾಲ್ಲೂಕಿನ ಹೋಕ್ರಾಣಾ ಗ್ರಾಮ ಪಂಚಾಯತಿಯಲ್ಲಿ ಕಾರ್ಯನಿರ್ವಾಹಿಸುತ್ತಿರುವ ಕ್ಲರ್ಕ-ಕಂ-ಡಾಟಾ ಎಂಟ್ರಿ ಆಪರೇಟರ್ ಶ್ರೀ ಮಹಾದೇವ ತಂದೆ ಬಾಬುರಾವ ಇವರು ದಿನಾಂಕ: 30-05-2016 ರಂದು ಆತ್ಮಹತ್ಯೆ ಮಾಡಿಕೊಂಡಿರುವ ಪ್ರಕರಣದಲ್ಲಿ ಹೋಕ್ರಾಣಾ ಪೋಲೀಸ್ ಠಾಣೆಯಲ್ಲಿ ಪ್ರಕರಣ ಸಂಖ್ಯೆ 0078/2016 ದಿನಾಂಕ 31-05-2016 ರನ್ವಯ ಸದರಿ ಕಾರ್ಯನಿರ್ವಾಹಕ ಅಧಿಕಾರಿಗಳ ವಿರುದ್ಧ ದೂರು ದಾಖಲಾಗಿರುತ್ತದೆ.

ಮೇಲ್ಕಂಡ 5 ಆರೋಪಗಳಿಗೆ ಸಂಬಂಧಿಸಿದಂತೆ, ಶ್ರೀ ಜಗನ್ನಾಥ ಮಾಣಿಕಪ್ಪ, ಹಿಂದಿನ ಕಾರ್ಯನಿವಾಹಕ ಅಧಿಕಾರಿ ತಾಲ್ಲೂಕು ಪಂಚಾಯತ್, ಔರಾದ್(ಬಿ) ಇವರು ತಮ್ಮ ಕರ್ತವ್ಯ ನಿರ್ವಹಣೆಯಲ್ಲಿ ತೀವ್ರ ತರವಾದ ಲೋಪವೆಸಗಿರುವುದು, ಕಾನೂನುಬಾಹಿರ ಚಟುವಟಿಕೆಗಳನ್ನು ಮಾಡಿರುವುದು, ಬೀದರ್ ಜಿಲ್ಲಾ ಪಂಚಾಯತ್‌ನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ವರದಿಯಿಂದ ಮೇಲ್ನೋಟಕ್ಕೆ ಸಾಬೀತಾಗುತ್ತದೆ/ಕಂಡುಬರುತ್ತದೆ. ಸದರಿ ಅಧಿಕಾರಿಯು ತೀವ್ರ ತರವಾದ ಕರ್ತವ್ಯಲೋಪವೆಸಗಿ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ವರ್ತಿಸಿರುವುದರಿಂದ ಸದರಿಯವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಕರ್ನಾಟಕ ನಾಗರೀಕ ಸೇವಾ (ವನಿಮೇ) 1957ರ ನಿಯಮ (10)(1)(ಡಿ) ರನ್ವಯ ಅಮಾನತ್ತುಗೊಳಿಸಬಹುದಾಗಿರುತ್ತದೆ.

ಮೇಲ್ನೋಟಕ್ಕೆ ಬೃಹತ್ ಪ್ರಮಾಣದ ಹಣ ದುರುಪಯೋಗವಾಗಿರುವುದು ಮತ್ತು ಗಂಭೀರ ಸ್ವರೂಪದ ಅಕ್ರಮಗಳು ನಡೆದಿರುವುದು ಕಂಡು ಬರುವುದರಿಂದ ಮೇಲೆ ತಿಳಿಸಿರುವ ಅಧಿಕಾರಿ/ನೌಕರರ ವಿರುದ್ಧದ ಅಕ್ರಮಗಳ ಬಗೆಗಿನ ತನಿಖೆ / ಇಲಾಖಾ ವಿಚಾರಣೆಯನ್ನು ಬಾಕಿ ಇಟ್ಟು ಸದರಿಯವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅಮಾನತ್ತುಪಡಿಸಲು ಸರ್ಕಾರವು ನಿರ್ಧರಿಸಿ ಈ ಕೆಳಕಂಡಂತೆ ಆದೇಶಿಸಿದೆ

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 101 ವಿಸೇಜಿ 2016 ಬೆಂಗಳೂರು ದಿನಾಂಕ:18.08.2016**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ ಸರ್ಕಾರವು ಶ್ರೀ ಜಗನ್ನಾಥ ಮಾಣಿಕಪ್ಪ, ಕಾರ್ಯನಿರ್ವಾಹಕ ಅಧಿಕಾರಿಗಳು, ತಾಲ್ಲೂಕು ಪಂಚಾಯತ್, ಔರಾದ್(ಬಿ) ರವರು ತಮ್ಮ ಕಾರ್ಯ ನಿರ್ವಹಣೆಯಲ್ಲಿ ಸಂಪೂರ್ಣ ನಿಷ್ಠೆಯನ್ನು ತೋರದೆ ತೀವ್ರ ತರವಾದ ಕರ್ತವ್ಯಲೋಪವೆಸಗಿ ಸರ್ಕಾರಿ ನೌಕರರಿಗೆ ತರವಲ್ಲದ ರೀತಿಯಲ್ಲಿ ವರ್ತಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿರುವುದರಿಂದ ಸದರಿಯವರನ್ನು ಕರ್ನಾಟಕ ನಾಗರೀಕ ಸೇವಾ(ವನಿಮೇ) ನಿಯಮಗಳು 1957ರ ನಿಯಮ 10(1)(ಡಿ) ರ ಅನುಸಾರ ಅವರ ವಿರುದ್ಧದ ಆರೋಪಗಳ ಕುರಿತಂತೆ ತನಿಖೆ / ಇಲಾಖಾ ವಿಚಾರಣೆಯನ್ನು ಬಾಕಿ ಇಟ್ಟು ತಕ್ಷಣದಿಂದ ಜಾರಿಗೆ ಬರುವಂತೆ ಸೇವೆಯಿಂದ ಅಮಾನತ್ತುಪಡಿಸಿದೆ.

ಅಮಾನತ್ತುಗೊಂಡಿರುವ ಮೇಲಿನ ಅಧಿಕಾರಿಯವರು ಅಮಾನತ್ತಿನ ಅವಧಿಯಲ್ಲಿ ನಿಯಮಾನುಸಾರ ಜೀವನಾಧಾರ ಭತ್ಯೆಯನ್ನು ಪಡೆಯಲು ಅರ್ಹರಿರುತ್ತಾರೆ.

ಸದರಿಯವರುಗಳು ಅಮಾನತ್ತಿನ ಅವಧಿಯಲ್ಲಿ ಸಕ್ಷಮ ಪ್ರಾಧಿಕಾರದ ಅನುಮತಿ ಇಲ್ಲದೆ ಕೇಂದ್ರ ಸ್ಥಾನವನ್ನು ಬಿಡತಕ್ಕದಲ್ಲವೆಂದು ತಿಳಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ.

18/8/2016
(ಎಸ್.ರಂಗನಗೌಡ).
ಸರ್ಕಾರದ ಅಧೀನ ಕಾರ್ಯದರ್ಶಿ.(ಸೇ-ಬಿ-ಸಿ)
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಗೆ:

1. ಮಹಾಲೇಖಪಾಲರು (ಲೆಕ್ಕಪತ್ರ-1 & 2/ಆಡಿಟ್) ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ, ವಿಧಾನ ಸೌಧ, ಬೆಂಗಳೂರು.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೀದರ್.
4. ಸಂಬಂಧಿಸಿದ ಅಧಿಕಾರಿ/ನೌಕರರುಗಳಿಗೆ (ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಬೀದರ್ ಇವರ ಮುಖಾಂತರ)

ಪ್ರತಿಯನ್ನು:

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು
2) ಸರ್ಕಾರದ ಪ್ರಧಾನ ಕಾರ್ಯದರ್ಶಿ/ ಪ್ರಧಾನ ಕಾರ್ಯದರ್ಶಿ(ಪಂ.ರಾಜ್)/ಉಪ ಕಾರ್ಯದರ್ಶಿ (ಆಡಳಿತ), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಇವರ ಆಪ್ತ ಶಾಖೆಗೆ.
3) ವಿಶೇಷಾಧಿಕಾರಿ, ಗಣಕ ಕೋಶ, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.
4) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.

GO